# ಗದ್ಯ ಭಾಗ

## ಈ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ

**ಒಣಮರದ ಗಿಳಿ** ಗದ್ಯಪಾಠ–01 ಅ.ರಾ. ಮಿತ್ರ

1. ಮರವನ್ನು ಬಿಟ್ಟು ಹೋಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?
   ತನಗೆ ಆಶ್ರಯ ಕೊಟ್ಟಿರುವುದಲ್ಲದೆ ಹಣ್ಣು ಕೊಟ್ಟಿದೆ, ಹಸಿರುಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ, ನೇರಳುನೀಡಿದೆ, ದುರದೃಷ್ಟದಿಂದ ಮರವನ್ನು ಈಗ ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಇಂತಹ ಸ್ಥಿತಿಯಲ್ಲಿ ಮರವನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಮರಕ್ಕೆ ಕೃತಘ್ನನಾಗಲು ತನಗೆ ಇಷ್ಟವಿಲ್ಲವೆಂದು ಹೇಳಿತು.
2. ಸಾಮಾನ್ಯವಾದ ಲೋಕ ವರ್ತನೆ ಯಾವುದು?
   ಆಶ್ರಯ ಕೊಟ್ಟವರಿಗೆ ದುರದೃಷ್ಟ ಒದುಗಿದಾಗ ಅವರನ್ನು ಕೈಬಿಟ್ಟು ಹೋಗಿ ಕೃತಘ್ನರೆನಿಸಿಕೊಳ್ಳುತ್ತಾರೆ. ಸುಖ ಸಂಪತ್ತು ಇರುವಾಗ ಜೋತೆಯಲ್ಲಿದ್ದು ದುರ್ಬರಗಳಿಗೆಯಲ್ಲಿ ಅವರಿಂದ ದೂರವಾಗುವುದು, ಉಪಕಾರ ಸ್ಮರಣೆ ಮಾಡದೆ ಇರುವುದು ಸಾಮಾನ್ಯ ಲೋಕವರ್ತನೆಯಾಗಿದೆ.
3. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?
   ತಾನು ವಾಸವಾಗಿರುವ ಈ ಮರವು ಮೊದಲಿನಂತೆ ಹಸಿರಿನಿಂದ ಕಳಿಕಳಿಸುವಂತಾಗಬೇಕು. ಫಲಪುಷ್ಪ ಭಾರದಿಂದ ಬೀಗುವ ನೆರಳು ಕೊಡುವ ಮರವನ್ನು ದಯಾಪಾಲಿಸಬೇಕೆಂದು' ವರವನ್ನು ಕೆಳಿತು.

**ಅಸಿ–ಮಸಿ–ಕೃಷಿ** ಗದ್ಯಪಾಠ–02 ಶ್ರೀ.ಪಂಡಿತರಾಧ್ಯ ಶಿವಾಚಾರ್ಯ ಸ್ವಾಮಿಗಳು

1. ದೇಶದ ಅಭಿವೃದ್ಧಿ ಕುರಿತು ಜನರಾಡುವ ಮಾತುಗಳಾವುವು?
   ವೈಜ್ಞಾನಿಕ ಬೆಳವಣಿಗೆಯೇ ನಿಜವಾದ ಪ್ರಗತಿ. ದೊಡ್ಡ ದೊಡ್ಡ ಆಣೆಕಟ್ಟುಗಳ ನಿರ್ಮಾಣವೇ ಜನರ ಉದ್ಧಾರದ ದಾರಿ, ವಿದ್ಯತ್ ಉತ್ಪಾದನೆಯೇ ಇವೆಲ್ಲಕ್ಕೂ ಮೂಲ ಪ್ರೇರಣೆ.
2. ನಮ್ಮ ದೇಶದ ರಕ್ಷಣಾ ಪಡೆ ಏಕೆ ಪ್ರಬಲವಾಗಿರಬೇಕು?
   ಸೈನಿಕರು ಪ್ರಬಲರಾಗಿದ್ದಾಗ ದೇಶವನ್ನು ರಕ್ಷಣೆ ಮಾಡಲು ಸಾಧ್ಯ ಇಲ್ಲದಿದ್ದರೆ ಬಲಿಷ್ಠ ದೇಶ ಎಲ್ಲರನ್ನು ಹೊಡೆದು ಹಾಕಿ ತಾನೇ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಸ್ಥಾಪಿಸಿ ಸರ್ವಾಧಿಕಾರಿಯಂತೆ ಮೆರೆಯ ಬಹುದು ಆದುದ್ದರಿಂದ ನಮ್ಮ ರಕ್ಷಣಾ ಪಡೆ ತುಂಬಾ ಪ್ರಬಲರಾಗಿರಬೇಕು.
3. ಪೆನ್ನು ಖಡ್ಗಕ್ಕಿಂತ ಹರಿತವಾದದ್ದು ಏಕೆ?
   ಏಕೆಂದರೆ ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಅಂದರೆ ಬರವಣಿಗೆ ಅಷ್ಟೊಂದು ಪರಿಣಾಮಕಾರಿಯಾದುದು. ಪತ್ರಿಕೆಯ ಒಂದು ಲೇಖನ ಕಾದಂಬರಿಯ, ಕಥ, ಕವನ ಹಲವರ ಬದುಕನ್ನು ಬದಲಾಯಿಸಬಲ್ಲದು ಒಂದು ಸರ್ಕಾರವನ್ನು ಉರುಳಿಸಿ ಮತ್ತೊಂದು ಸರ್ಕಾರ ತರಬಹುದು. ಈ ನಿಟ್ಟಿನಲ್ಲಿ ಬರವಣಿಗೆ ಹೆಚ್ಚು ಶಕ್ತಿ ಶಾಲಿಯಾದದು.
4. ರೈತರು ಎದುರಿಸುತ್ತಿರುವ ಸಮಸ್ಯೆಗಳಾವವು?
   ರೈತರು ಒಂದಡೆ ನಿಸರ್ಗದ ಜೋತೆ ಹೋರಾಟ ಮಾಡಬೇಕು, ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ ಉತ್ತಮ ಬೀಜ ಸಿಗುವುದಿಲ್ಲ , ಭೂಮಿ ಬರಡಾಗುತ್ತದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ವಿವಿಧ ರೀತಿಯ ರೋಗಗಳು ತಗುಲಿ ಬೇಸಾಯವೇ ಬೇಡ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಮತ್ತೊಂದೆಡೆ ತಾನು ಬೆಳೆಗೆ ಸರಿಯಾದ ಬೆಲೆ ಸಿಗದೆ ವ್ಯವಸ್ಥೆಯ ವಿರುದ್ಧವೂ ಹೋರಾಟ ನೆಡಸಬೇಕಾಗಿದೆ.

5. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು?
ಅಕ್ಕಿ , ರಾಗಿ, ಟೊಮೊಟೊ ಯಾವುದೆ ಆಹಾರವು ಕಾರ್ಖಾನೆಗಳಿಂದ ತಯಾರಿಸಲು ಸಾಧ್ಯವಿಲ್ಲ ಇವೆಲ್ಲಕ್ಕೆ ಭೂಮಿಯೇ ಬೇಕು.
6. ಸರ್ವಜ್ಞ ಕವಿಯು ಕೃಷಿಯ ಬಗ್ಗೆ ಹೇಳಿರುವ ವಚನ ಯಾವುದು?
'ಕೋಟಿ ವಿದ್ಯೆಗಳಲ್ಲಿ ಮೇಟಿ ವಿಧ್ಯೆಯೇ ಮೇಲು. ಮೇಟಿಯಿಂ ರಾಟೆ ನಡೆದುಲ್ಲದೆ ದೇಶದಾಟವೆ ಕಡಗುಂ' ಎಂದು ವಚನ ಹೇಳಿದರು

**ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ ಗದ್ಯಪಾಠ-03 ಶ್ರೀ. ಆರ್.ಎಂ. ಕಲ್ಲನಗೌಡ**

1. ಬಾಲಕ ಪುಟ್ಟಯ್ಯ ಕಣ್ಣುಗಲನ್ನು ಕಳೆದುಕೊಂಡದ್ದು ಹೇಗೆ?
ಹುಟ್ಟಿದ ಆರು ದಿಂಗಳಿಗೆ ಕಣ್ಣಿನ ರೋಗ ಬಂದಿತ್ತು. ಬರಿನಾಟಿ ವೈದ್ಯ ಇತ್ತು ಅವರು ಕಣ್ಣುಗುಡ್ಡೆಗೆ ನಾಯಿಯ ಮೈಯ್ಯಲ್ಲಿರುವ ಹುಳು ಮುಟ್ಟಿಸಬೇಕು ಎಂದು ಹೇಳಿದರು ಆಗ ಮುಟ್ಟಿಸುವಾಗ ಹುಳು ಕೈ ಜಾರಿ ಕಣ್ಣು ಒಳಗೆ ಬಿದ್ದು ಬಿಟ್ಟವು ಆಗ ಪುಟ್ಟಯ್ಯನ ಕಣ್ಣುಗಳನ್ನು ಕಳೆದುಕೊಂಡರು.
2. ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳ ಶಿಷ್ಯನಾದದ್ದು ಹೇಗೆ?
ಚುರುಕುತನ ಮತ್ತು ಏಕಾಗ್ರತೆಯನ್ನು ನೋಡಿ ಅವರು ಸೋದರಮಾವ ಚಂದ್ರಶೇಕಯ್ಯನವರು ಬಾಲಕ ಪುಟ್ಟಯ್ಯ ಪಂಚಾಕ್ಷರಿ ಗವಾಯಿಗಳಿಗೆ ಒಪ್ಪಿಸಿದರು.
3. ಪಂಚಾಕ್ಷರಿ ಗವಾಯಿಗಳ ಶಿಷ್ಯತ್ವ ಪಡೆದ ಬಾಲಕ ಪುಟ್ಟಯ್ಯ ಯಾವ ಮನಸ್ಥಿತಿ ಹೊಂದಿದ್ದನು?
"ನಾನೊಬ್ಬ ಅಂಧ ಬಾಲಕ ನನ್ನಿಂದೇನಾಗಲು ಸಾಧ್ಯ? ಜಗತ್ತನ್ನು ನೋಡದ ನನಗೆ ಜಗತ್ತಿಗೆ ಏನು ಕೊಡಲು ಸಾಧ್ಯ? ಇದ್ದಷ್ಟು ದಿನ ಗುರು ಸೇವೆ ಮಾಡುತ್ತಾ ಊಟ ಸಿಕ್ಕಲ್ಲಿ ಹೊಟ್ಟೆ ಹೊರೆದು, ನೆಲ ಸಿಕ್ಕಲ್ಲಿ ಶಯನಗೈದು ಈ ಬದುಕನ್ನು ಮುಗಿಸಿದರಾಯಿತು.
4. ಪುಟ್ಟರಾಜ ಗವಾಯಿಗಳು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು?
ಪುಟ್ಟರಾಜ ಗವಾಯಿಗಳು 'ಅಷ್ಟಾಧ್ಯಾಯಿ', ಶರ್ಮಮರ್ಮನ 'ಕಾತಂತ್ರ', ಕೇಲಿರಾಜನ 'ಶಬ್ದಮಣಿದರ್ಪಣ', ನಿಜಗುಣ ಶಿವಯೋಗಿಗಳ 'ಕೈವಲ್ಯ ಪದ್ಧತಿ' ಜೋತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬದಾನುಶಾಸ್ತ್ರ, ಛಂದಶಾಸ್ತ್ರ ಹಾಗೂ ಕನ್ನಡ ವ್ಯಾಕರಣಗಳಲ್ಲಿ ನಿಷ್ಣಾತರಾದರು.
5. ತಾಯಿ ಸಿದ್ಧಮ್ಮ ಪುಟ್ಟರಾಜನನ್ನು ನನ್ನದಾಗಲಿ ಏನೆಂದು ಆಶೀರ್ವದಿಸಿದಳು?
'ನಿನ್ನಂಥ ಶ್ರೇಷ್ಠ ಪುತ್ರರ್ನವೊಂದನ್ನು ಹೆತ್ತ ಬಾಗ್ಯ ನನ್ನದಾಗಲಿ ಹೆಂಡತಿ, ಮಕ್ಕಳು ಸಂಸಾರವೆಂಬ ಬಂಧನದಲ್ಲಿ ಬಂಧಿಯಾಗುವುದು ನಿನಗಿಷ್ಟವಿಲ್ಲದಿದ್ದರೆ ನನ್ನ ಜೊತೆ ಬರುವುದು ಬೇಡ ಮಗುವೆ ಗುರು ಪಂಚಾಕ್ಷರು ತೋರುವ ಮಾರ್ಗದಲ್ಲಿ ನೀನು ನೆಡೆದು ಅಮರನಾಗು ಎಂದು ಆರ್ಶಿವದಿಸಿದಳು.
6. ಪುಟ್ಟರಾಜ ವೇಷಭೂಷಣಗಳು ಹೇಗಿದ್ದವು?
ಶುಭ್ರವಾದ ಬಿಳಿಯ ಉದ್ದನೆಯ ಅಂಗಿ, ಪಂಚೆ, ತಲೆಯ ಮೇಲೊಂದು ಅಂದವಾಗಿ ಶಿಸ್ತಿನಿಂದ ಸುತ್ತಿದ ಕಾವಿ ಬಣ್ಣದ ಪೇಠ, ಹಣೆಯಲ್ಲಿ ಸದಾ ಎದ್ದುಕಾಣುವ ವಿಭೂತಿ, ಹುಬ್ಬುಗಳೆರಡರ ನಡುವೆ ಗಂಧದ ಬೊಟ್ಟು ಕೊರಳಲ್ಲಿ ರುದ್ರಾಕ್ಷಿಮಾಲೆ, ಕೊಂಚವೇ ಬಾಗಿದ ಕತ್ತು, ಕೈಯಲ್ಲೊಂದು ಊರುಗೋಲಿ, ಇವು ಪುಟ್ಟರಾಜ ವೇಷಭೂಷಣಗಳು
7. ಪುಟ್ಟರಾಜರಿಗೆ ದೊರೆತ ಗೌರವ ಪ್ರಶಸ್ತಿಗಳಾವುವು?
ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ 35ಕ್ಕೂ ಅಧಿಕ ಕೃತಿಗಳನ್ನು ರಚಿಸಿ ತ್ರಿಭಾಷಾ ಕವಿಯಾದರು. ಅವರ ಸಾಧನೆಗೆ ನಾಡೋಜ, ಬಸವಶ್ರೀ, ಪದ್ಮಭೂಷಣ , ಗೌರವ ಡಾಕ್ಟರೆಟ್ ಮುಂತಾದ ಗೌರವ ಪ್ರಶಸ್ತಿಗಳು ಸಾಲುಗಟ್ಟಿ ಬಂದವು.

8. ವಿಶೇಷ ಚೇತನರಿಗೆ ನೀವು ಯಾವ ಮಾತುಗಳಿಂದ ಧೈರ್ಯ ತುಂಬುವಿರಿ?
ದೈಹಿಕ ನ್ಯೂನತೆಗಳು ಎಂದೂ ಅಡ್ಡಿಯಾಗಲಾರವು ಅದರೊಂದಿಗೆ ಅಸಾಧ್ಯವಾದುದನ್ನು ಸಾಧಿಸಬೇಕೆಂಬ ಛಲವೂ ಸೇರಿಕೊಂಡರೆ ಗುರಿಯೂ ಹತ್ತಿರವಾಗುತ್ತದೆ. ಯಾವುದೇ ಅಂಗವೈಕಲ್ಯವಿದ್ದರು ಸಕಾರಾತ್ಮಕ ಚಿಂತನೆ ಮಾಡುವುದರ ಮೂಲಕ ಗುರಿಯನ್ನು ಸಾದಿಸಬೇಕು.

**ಹಕ್ಕಿಗೂಡುಗಳ ನಿಗೂಡ ಜಗತ್ತು ಗದ್ಯಪಾಠ-04 ಶ್ರೀ. ಕೆ.ಪು ಕೃಪಾಕರ ಮತ್ತು ಸೇನಾನಿ**

1. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಯಾವ ಅನುಭವಗಳಿವೆ?
ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸದ ದನಿಯಿದೆ, ಕಾವು ಗುಟುಕು ಪಡೆದ ಜೀವ ಕಣ್ತೆರವ ಸೃಷ್ಟಿಯ ಅಚ್ಚರಿಯಿದೆ. ಶತ್ರುಗಳ ಬೇಟೆಗೆ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಈ ಅವಘಡಗಳನ್ನು ಎದುರಿಸಿ ಬದುಕುವ ಸಾಹಸ ಗಾಥೆ ಇದೆ. ಕಲಾವಿದನು ಸ್ಫೋಟಜ್ಞತೆ, ವಿಜ್ಞಾನಿಯ ತಂತ್ರಜ್ಞಾನವೂ ಸಹ ಸಮನ್ವಯಗೊಂಡಿದೆ.
2. ಹಕ್ಕಿಗೂಡಿನ ವಿಶೇಷತೆಗಳೇನು?
ಅವು ಕೆಲವು ಕೀಟ, ಉರುಗ ಸಂತತಿ ಮತ್ತು ಹಲವೂ ಸಸ್ತನಿಗಳಂತೆ ಸುಂದರವಾಗಿ ಗೂಡು ಕಟ್ಟುತ್ತವೆ. ಇಲ್ಲಿ ವಾಸ್ತು ಶಿಲ್ಪಿಯ ಕಲ್ಪನೆಸಾಕಾರಗೊಳ್ಳುತ್ತದೆ. ಅವು ಸಿಮೆಂಟ್ ಗಾರೆಯಂಥ ವಸ್ತುಗಳಿಗಿಂತಲು ಭಿನ್ನವಾದ ವಸ್ತುಗಳನ್ನು ಬಳಸಬಲ್ಲವು. ಒಳಗೊಡೆಯ ಗೊಡೆಯನ್ನು ಪ್ಲಾಸ್ಟರ್ ಮಾಡಬಲ್ಲವು. ಸೌಂದರ್ಯಪ್ರಜ್ಞೆ ಅವಕ್ಕಿದೆ.
3. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?
ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶಗಳು ಮುಖ್ಯವಾಗಿ ರಕ್ಷಣೆಗಾಗಿ, ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳ ವಿರುದ್ಧ ಬದುಕಲು, ಹವಮಾನ ವೈಪರೀತ್ಯವನ್ನು ಎದುರಿಸಲು, ಮೊಟ್ಟೆ ಮರಿಗಳನ್ನು ರಕ್ಷಿಸಿಕೊಳ್ಳಲು ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ನಿರ್ಮಿಸಿ ಕೊಳ್ಳುತ್ತವೆ.
4. ಹಕ್ಕಿಗಳು ಗುಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?
ಸಾಗರದ್ವೀಪ ಗಿರಿ, ಶಿಖರವನೆತ್ತಿ ಮನುಷ್ಯ ನುಸಳಲಾರದ ನಿಬೀಢ ವನಶ್ರೇಣಿ, ಸೂರ್ಯನ ಬೆಳಕಿಗೂ ಪ್ರವೇಶ ನಿರಾಕರಿಸುವ ಕಗ್ಗತ್ತಲ ಕಣಿವೆ, ರಕ್ತ ಹೆಪ್ಪುಗಟ್ಟಿಸುವ ಶೀತಲ ಧ್ರುವ ಪ್ರದೇಶ ಹೀಗೆ ಎಲ್ಲ ಕಡೆ ಗೂ ಕಟ್ಟಬಲ್ಲವು.
5. ಹಕ್ಕಿಗಳು ಬದಲಾದ ಪರಿಸರಕ್ಕೆ ಹೊಂದುಕೊಂಡು ಗೂಡುಕಟ್ಟುವುದಕ್ಕೆ ಲೇಖಕರು ಯಾವ ಉದಾಹರಣೆಗಳನ್ನು ನೀಡುತ್ತಾರೆ?
ಅವು ಗೂಡನ್ನು ಮನುಷ್ಯರಿರುವ ಕೇರೆಗಳಲ್ಲಿ ವಾಹನ ಸಂಚಾರ ಹೆಚ್ಚುತ್ತಿರುವ ಸ್ಥಳಗಳನ್ನೇ ಆಯ್ದುಕೊಳ್ಳುತ್ತವೆ ಹಕ್ಕಿಗಳ ನೆಲೆಯನ್ನು ಅನೇಕ ಕಡೆ ಆಕ್ರಮಿಸಿಕೊಂಡ ನಂತರ ಹಲವಾರು ಹಕ್ಕಿಗಳು ಹೊಸ ಪರಿಸರಕ್ಕೆ ಥಟ್ಟನೆ ಹೊಂದುಕೊಂಡು ಟ್ರಾನ್ಸ್‌ಫಾರ್ಮರ್ ಬಳಿ, ಮೀಟರ್ ಪೆಟ್ಟಿಗೆಯಲ್ಲಿ, ಅಷ್ಟೇ ಏಕೆ ವಿದ್ಯುತ್ ತಂತಿಗಳಲ್ಲಿಯೂ ತೂಗಾಡುವ ಗೂಡು ಕಾಣುತ್ತವೆ.
6. ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತದೆ?
ವರ್ಣಮಯ ಹೂದಳವನ್ನು ಅಥವಾ ಹೊಳೆವ ಕಲ್ಲುಗಳನ್ನು ಹಕ್ಕಿ ತಂದು ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳಂತೂ ಬಣ್ಣದ ಗಾಜಿನ ಚುರು, ಬಟ್ಟೆಯ ಚಿಂದಿ ಮುಂತಾದವುಗಳನ್ನು ಗೂಡಿಗೆ ತಂದು ಅಲಂಕರಿಸುತ್ತವೆ.

7. ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿ ಗೂಡುಗಳ ವಿಶೇಷತೆಗಳೇನು?

(Blacknaped bule fly catcher) ಮತ್ತು ಸಗ್ಗದಕ್ಕಿ (ಫ್ಯಾರಡೈಸ್ ಫ್ಲೈಕ್ಯಾಚರ್) ತಮ್ಮ ಗೂಡನ್ನು ಬಹು ಸುಂದರವಾಗಿ ಅಲಂಕರಿಸುತ್ತದೆ. ಎರಡು ಒಣಕಡ್ಡಿಯನ್ನು ಅಪ್ಪಿ ಹಿಡಿದಂತೆ ಗುರುತ್ವಾಕರ್ಷಕವಾಗಿ ಸಮತೋಲನವನ್ನು ಕಾಯ್ದಿಟ್ಟುಕೊಂಡು ಬಟ್ಟಲಾಕಾರದಲ್ಲಿ ಅವು ಗೂಡು ನಿರ್ಮಿಸಿ ಹೊರಮೈಗೆ ಜೇಡರ ಮೊಟ್ಟೆಗಳ ಕೋಶಗಳನ್ನು ನಿರ್ದಿಷ್ಟ ಅಂತರದಲ್ಲಿ ಜೋಡಿಸಿ ಅಲಂಕರಿಸುತ್ತದೆ. ಶತ್ರುಗಳ ಕಣ್ಣಿಗೆ ಗೂಡು ಗೋಚರಿಸಬಾರದೆಂಬುದು ಅದರ ಉದ್ದೇಶವಾಗಿರುತ್ತದೆ.

## ಕಾಫೀ–ಕಪ್ಪು ಗದ್ಯಪಾಠ–05 ಶ್ರೀ. ಗುರುರಾಜ ಕರ್ಜಗಿ

1. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?
   ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿದ್ದರು. ಒಂದಲ್ಲ ಒಂದು ತಕರಾರು, ಎಲ್ಲ ಕಡೆ ವ್ಯಾಪಾರ ಕಡಿಮೆಯಾಗುತ್ತದೆ. ರೂಪಾಯಿ ಬೆಲೆ ಕುಸಿಯುತ್ತದೆ. ಹಣಕ್ಕೇ ಬೆಲೆಯೇ ಇಲ್ಲ, ಮಕ್ಕಳು ಬೆಳೆಯುತ್ತಿದ್ದಾರೆ ಅವರನ್ನು ಅರ್ಥಮಾಡಿಕಳ್ಳುವುದೇ ಕಷ್ಟ. ಈ ರೀತಿಯಾಗಿ ತೊಂದರೆಗಳ ಸರಮಾಲೆ ಬೆಳೆಯುತ್ತಿದೆ ಎಂದು ವಿದ್ಯಾರ್ಥಿಗಳು ಹೇಳಿದರು.
2. ಹೆಡ್‌ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ಯಾವ ತರಹದ ಕಪ್ಪುಗಳಿದ್ದವು?
   30–35 ಕಪ್ಪುಗಳಿದ್ದವು ಅದರಲ್ಲಿ ಕೆಲವು ಅತ್ಯಂತ ಬೆಲೆ ಬಾಳುವಂತಹವು. ಚೈನಾ ಪಿಂಗಾಣಿಗಳು, ಕೆಲವು ಸುಂದರ ಗಾಜಿನವು, ಕೆಲವು ಸ್ಟೀಲಿನ ಲೋಟಗಳು, ಪ್ಲಾಸ್ಟಿಕ್ ಕಪ್ಪುಗಳು ಇನ್ನೂ ಕೆಲವು ಏನು ಬೆಲೆ ಬಾಳದ ಗಾಜಿನವು ಕಪ್ಪುಗಳು ಇದ್ದವು.
3. ಹೆಡ್‌ಮಾಸ್ತರರು ಮಕ್ಕಳಿಗೆ ಏನೆಂದು ಹೇಳಿ ಅಡುಗೆ ಮನೆಗೆ ಹೋದರು?
   'ಮಕ್ಕಳೇ ಒಂದು ಐದು ನಿಮಿಷ ಇರಿ, ನಿಮಗೆಲ್ಲ ಒಳ್ಳೆಯ ಕಾಫೀ ಮಾಡಿಕೊಂಡು ಬರುತ್ತೇನೆ. ನನ್ನ ಹೆಂಡತಿ ಹೋಗಿ ಕೆಲವರ್ಷವಾಯಿತು ಆದರೆ ನನ್ನ ಕಾಫೀ ಕೂಡಾ ತುಂಬಾ ಚನ್ನಾಗಿರುತ್ತದೆ'. ಎಂದು ಜೋರಾಗಿ ನಕ್ಕು ಅಡಿಗೆ ಮನೆಗೆ ಹೋದರು.
4. ಭಗವಂತ ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು?
   ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ. ಅವನು ಕೊಡುವದು ಈ ಕಾಫೀ ಮಾತ್ರ. ಕಪ್ಪುಗಳನ್ನಲ್ಲ. ಅವನ್ನೆಲ್ಲ ನಾವು ಮಾಡಿಕೊಂಡಿದ್ದೇವೆ. ಭಗವಂತ ಕೊಟ್ಟ ಈ ಜೀವನವನ್ನು ಆಸ್ವಾದಿಸಿ ಅಲಂಕಾರಗಳ ಬೆನ್ನತ್ತಿ ಓಡಿ ಓಡಿ ಜೀವನವನ್ನು ಮರೆಯಬೇಡಿ ಸಂತೋಷವಾಗಿರುವವರಿಗೆ ಜೀವನದಲ್ಲಿ ಎಲ್ಲವೂ ಚೆನ್ನಾಗಿರುವುದು ಸಿಕ್ಕಿರಲಿಕ್ಕಿಲ್ಲ. ಎಂದು ಹೆಡ್‌ಮಾಸ್ತರ ತಿಳಿಸಿದರು.

## ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ ಗದ್ಯಪಾಠ–06 ಡಾ॥ ಬಿ. ಪಾಟೀಲ ಮತ್ತು ಕೆ.ಸಿದ್ದಯ್ಯ ಸ್ವಾಮಿ

1. ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು?
   1666ರಲ್ಲಿ ಲಂಡನ್ ನಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿ 3 ದಿನ ಲಂಡನ್ ಹೊತ್ತಿ ಉರಿಯಿತಂತೆ 1300 ಮನೆಗಳು, 80 ಚರ್ಚಗಳು ಸುಟ್ಟು ಹೊಗಿದ್ದವು. ಈ ದುರಂತದ ನೆನಪಿಗಾಗಿ 200 ಅಡಿ ಎತ್ತರದ ಸ್ತಂಭ ನಿಲ್ಲಿಸಿದ್ದಾರಂತೆ. ಅದಕ್ಕಿಂತ ಒಂದೆರೆಡು ವರ್ಷದ ಹಿಂದೆ ಒಂದೇ ಪ್ಲೇಗ್ ಗೆ ಲಂಡನ್ ನಲ್ಲಿ ಹನ್ನೆರಡು ಹದಿಮೂರು ಸಾವಿರ ಜನರು ಸತ್ತು ಹೋದರಂತೆ ಎಂದು ತಿಳಿಸಿದರು.

2. ಥೇಮ್ಸ ನದಿಯ ಉತ್ತರ ಹಾಗೂ ದಕ್ಷಿಣಕ್ಕೆ ಯಾವ ವರ್ಗದ ಜನ ವಾಸಿಸುತ್ತಾರೆ?
ಉದ್ಯಮಗಳು, ಫ್ಯಾಕ್ಟರಿಗಳು ಹೆಚ್ಚಾಗಿ ರಾಜಕಾರಣಿಗಳು ಇರುತ್ತಾರಂತೆ. ಉತ್ತರಕ್ಕೆ ವ್ಯಾಪಾರಿಗಳು , ಕಡಿಮೆ ಆದಾಯ ಹೊಂದಿರುವವರು ವಾಸಿಸುತ್ತಾರೆ.
3. ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು?
13 ಬ್ರೀಜ್‌ಗಳಿವೆ ಅದರಲ್ಲಿ ಟವರ್ ಬ್ರೀಜ್ ಪ್ರಮುಖವಾದದ್ದು. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದುವರೆ ಎರಡು ನೀಮಿಷದಲ್ಲಿ ಮೇಲಕ್ಕೆದ್ದು ಹಡುಗುಗಳು ಹೋಗಲು ದಾರಿಮಾಡಿಕೊಡುತ್ತದೆ.
4. ಥೇಮ್ಸ್ ನದಿಯ ಮೇಲಿರುವ ಪ್ರಸಿದ್ಧ ಸೇತುವೇಗಳಾವವು?
ವೆಸ್ಟ್ ಮಿನಿಸ್ಟರ್ ಸೇತುವೆ, ವಾಟರ್ಲೂ ಸೇತುವೆ, ಲಂಡನ್ ಸೇತುವೆ ಪ್ರಸಿದ್ಧವಾಗಿವೆ.
5. ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರಿಯುತ್ತಾರೆ?
3-4 ಅಂತಸ್ತಿನ ಚೌಕಾಕಾರದ ಬೃಹತ್ ಕಟ್ಟಡದಮೇಲೆ ಟವರ್‌ಗಳಿವೆ ಇದು ರಾಜರು ತಮಗೆ ಆಗದವರನ್ನು ಕೊಲ್ಲಿಸುವ ಜಾಗ. ರಾಜಮನೆತನಗಳಲ್ಲಿನ ವೈಷಮ್ಯ, ಅಸುಯೆ, ಕೊಲೆ, ಸುಲಿಗೆಗಳ ತಾಣವಿದ್ದು ರಾಬರ್ಟ್ ಕ್ಲೈವ್ 1757ರ ಪ್ಲಾಸಿ ಕದನದಲ್ಲಿ ವಶಪಡಿದ ಶಸ್ತ್ರಾಸ್ತ್ರಗಳನ್ನು ಇಲ್ಲಿ ಇಡಲಾಗಿದೆಯಂತೆ. ಆದ್ದರಿಂದ ಲಂಡನ್ ನಿಗೂಡ ಸ್ಥಳವಾಗಿದೆ.

## ನನ್ನ ಗೋಪಾಲ — ಗದ್ಯಪಾಠ-07 — ಶ್ರೀ.ಕುವೆಂಪು

1. ಮಲಗಿದ್ದ ಗೋಪಾಲನನ್ನು ತಾಯಿಯು ಯಾವ ಮಾತುಗಳಿಂದ ತಿಳಿಸಿದಳು?
'ಗೋಪಾಲ ಬೆಳಗಾಯ್ತು ಏಳು ನೋಡಿಲ್ಲಿ ಸೂರ್ಯನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿಯ ಬಳಿಯ ತೆಂಗಿನ ಮರದ ತುದಿಯಲ್ಲಿ ಇದಾನೆ. ಕೇಳಲ್ಲಿ ಹಕ್ಕಿಗಳು ಹಾಡುತ್ತ ಹಾರಾಡಿ ಕರೆಯುತ್ತಿವೆ, ಎದ್ದೇಳು ಗೋಪಾಲ ಶಾಲೆಗೆ ಹೊತ್ತಾಯಿತು ಎಂದು ಹೇಳುತ್ತಾಳೆ?
2. ಗೋಪಾಲನು ಬನದ ಸೊಗಸನ್ನು ಯಾವ ರಿತಿ ವರ್ಣಿಸಿದನು?
ಮಲ್ಲಿಗೆಯ ಹೂವು, ಕೇದಗೆಯ ಹೂವು, ಸಂಪಿಗೆಯ ಹೂವು, ಪರ್ವತತ ಬಾಳೆಯ ಹೂವು, ಗೋರಂಟೆಯ ಹೂವಿನಿಂದ ಕೂಡಿತ್ತು . ಅಲ್ಲಿದ್ದ ಹೂಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು. ಹಕ್ಕಿಗಳ ಇಂಪಾದ ಗಾನ, ತಂಗಾಳಿ , ಸೂರ್ಯದೇವನ ಹೊಂಬೆಳಕು ಹಸಿರಾದ ಚಿಗುರು ಹುಲ್ಲಿನಮೇಲೆ ಕೋಟ್ಯಾಂತರ ಹಿಮಮಣಿಗಳು ಮಿರುಗುವ ಲೀಲೆಯನ್ನು ವರ್ಣಿಸಿದನು.
3. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?
ಒಂದು ಸಣ್ಣ ಗುಡಿಸಲಿನಲ್ಲಿ ವಾಸಿಸುತ್ತಿದ್ದಳು ಅದರ ಜಗಲಿಯ ಮೇಲೆ ಒಂದು ಮೂಲೆಯಲ್ಲಿ ಗೋಪಾಲನ ಸಣ್ಣ ವಿಗ್ರಹವಿರುವ ದೇವರ ಗೂಡು. ಗೋಪಾಲನ ತಾಯಿ ಒಂದು ಚರಕದ ಮುಂದೆ ಕುಳಿತು ನೂಲುತ್ತಿದ್ದಳು. ಗೋಪಾಲನ ಹಾಗೂ ಅವನ ತಾಯಿ ನೂಲು ಮಾರಿ ಬಂದ ಮೂರು ಕಾಸಿನಲ್ಲಿ ತಮ್ಮ ಸಂಸಾರವನ್ನು ಸಾಗಿಸುತ್ತಿದ್ದರು.
4. ಬನದ ಗೋಪಾಲನ ವೇಷಬೂಷಣ ಹೇಗಿದ್ದವು ?
ತಲೆಯ ಮೇಲೆ ಸಣ್ಣದೊಂದು ಕಿರೀಟ, ನವಿಲುಗರಿ, ಕೈಲ್ಲೊಂದು ಕೊಳಲು. ಹೀಗೆ ಬನದ ಗೋಪಾಲನ ವೇಷಭೂಷಣವಾಗಿತ್ತು. ಒಬ್ಬಂಟಿಯಾದ ಗೋಪಾಲನನ್ನು ಕಾಡಿನಲ್ಲಿ ಕಂಡು ಸಂರಕ್ಷಿಸಲು ಈ ರಿತಿಯ ವೇಷಭೂಷಣದಲ್ಲಿ ಬರುವನು.

# ಗದ್ಯ ಭಾಗ

ಏಣಿ ಪದ್ಯ–01 ಶ್ರೀಮತಿ. ಸುಕನ್ಯಾ ಮಾರುತಿ

1. ಏಣಿಯ ಸಹಾಯದಿಂದ ಮೇಲೇರಿದವರಿಗೆ ಏಣಿಯ ಉಪದೇಶವೇನು?
   ಏಣಿಯು ಮೇಲಂತಸ್ತು ಯಾವಾಗಲೂ ಶಾಶ್ವತವಲ್ಲ ಅದು ಸುರಕ್ಷಿತವೂ ಅಲ್ಲ. ಆಕಾಶದಲ್ಲಿ ಎಷ್ಟೆಹೊತ್ತು ಹಾರಾಡಿದರೂ ಮತ್ತೆ ಅವರು ಕೆಳಗೆ ಇಳಿಯಲೇ ಬೇಕು. ಹಾಗೆಯೇ ಸಹಾಯ ಮಾಡಿದವರನ್ನು ಮರೆಯಬಾರದೆಂದು ಅವರನ್ನು ಮರೆತರೆ ಅವರಿಗೆ ಒಳಿತಲ್ಲ ಎಂದು ಉಪದೇಶಿಸಿದೆ.
2. ಏಣಿ ಹೇಳಿಕೊಳ್ಳುವ ಕಷ್ಟಗಳೇನು?
   ಜನ ಸಾಮಾನ್ಯರು ಅದರ ಮೇಲೆ ಭಾರವನ್ನು ಹಾಕಿ ಮೇಲಕ್ಕೆ ಏರಿದಾಗ ಅದು ಆ ಭಾರವನ್ನು ಕಷ್ಟಪಟ್ಟು ಹೊತ್ತು ಅವರು ಕೆಳಗೆ ಬೀಳದಂತೆ ಎತ್ತಿ ಹಿಡಿಯತ್ತಿದೆ.
3. ಮೇಲೆರಿದವರಿಗೆ ಏಣಿಯ ಮಹತ್ವ ಯಾವಗ ಅರಿವಾಗುತ್ತೆದೆ?
   ಏಣಿಯ ಸಹಾಯವನ್ನು ಮರೆತು ಮೇಲಂತಸ್ತಿನಲ್ಲಿ ಹಾರಾಡಿ ನಂತರ ಅವರ ಸೊಕ್ಕು ಕರಗಿ ಭೂಮಿ ಶಾಶ್ವತವೆಂಬ ಅರಿವು ಮೂಡಿದಾಗ ಏಣಿಯ ಮಹತ್ವ ಅರಿವಾಗುತ್ತದೆ.
4. ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?
   ಜನಸಾಮಾನ್ಯರಲ್ಲಿ ವಿನಯ ವಿಧೇಯ ಇರುತ್ತದೆಯೋ ಅಂಥಹ ಜನಸಾಮಾನ್ಯರ ನಮ್ರತೆಗೆ ಕರಗಿ ಅವರನ್ನು ಕೆಳಗೆ ಬೀಳದಂತೆ ಎತ್ತಿ ಹಿಡಿಯುತ್ತೇನೆಂದು ಹೇಳುತ್ತದೆ.

ಬೋಧಿವೃಕ್ಷದ ಹಾಡು ಪದ್ಯ–02 ಡಾ॥ಬಸವರಾಜ ಸಬರದ

1. ಸಿದ್ಧಾರ್ಥನಿಗೆ ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿ ಏನೆಂದು ಬಣ್ಣಿಸಿದ್ಧಾರೆ?
   ನಾಡಿನ ಅರ್ಥ ತಿಳಿದ ಸಂದರ್ಭವನ್ನು ಕವಿಯು ಬೆಳಿಗ್ಗೆ ಆಕಾಶದಲ್ಲಿ ಸೂರ್ಯನು ಬೆಳಗಿ ಬೋಧಿವೃಕ್ಷದಲ್ಲಿ ಕಂಡ ಮಹಾ ಬೆಳಕೆಂದು ಬಣ್ಣಿಸಿದ್ದಾನೆ.
2. ಸಿದ್ಧಾರ್ಥ ಬುದ್ಧನಾದ ಸಂದರ್ಭದಲ್ಲಿ ಕಾಡಿನ ತುಂಬ ಪ್ರೀತಿ ಹೇಗೆ ತುಂಬಿಕೊಂಡಿತು?
   ಕಾಡಿನ ತುಂಬ ಪ್ರೀತಿಯ ಹೊಳೆಯು ಕೆರೆತುಂಬಿ ಹರಿಯುವಂತೆ ಕಂಡಿತು. ಗೂಡಿನಲ್ಲಿ ಹಕ್ಕಿಗಳ ಹೊಸರಾಗ ಕೇಳಿಸಿತು. ಹೂವಿನ ಮಕರಂದವನ್ನು ಸವಿಯಲು ದುಂಬಿ ಹೂವಿನಿಂದ ಹೂವಿಗೆ ಹಾರಾಡುತ್ತಿತ್ತು. ಎಲ್ಲ ಗಿಡವು ಒಂದನ್ನೊಂದು ಅಪ್ಪಿಕೊಂಡು ಕುಣಿಯುವಂತೆ ಕಾಣುತ್ತಿತ್ತು.

ಸವಿಚೈತ್ರ ಪದ್ಯ–03 ಶ್ರೀ.ಬಸವರಾಜ ಸಾದರ

1. ಯುಗದ ಆದಿ ತಂದ ಸಂಭ್ರಮವೇನು?
   ಪ್ರಕೃತಿಯು ನವವಧುವು ಶೃಂಗಾರಗೊಂಡಂತೆ ಕಾಣುತ್ತದೆ. ಇದರಿಂದಾಗಿ ಜಗತ್ತೆಲ್ಲಾ ಹೊಸ ಕಳೆಯಿಂದ ಕಂಗೊಳಿಸುವದು ಎಲ್ಲೆಲ್ಲೂ ಚಿಗುರೊಡೆದ ಎಲೆಗಳಿಂದ ಬಣ್ಣ ಬಣ್ಣದ ಫಲಪುಷ್ಪಗಳಿಂದ ಕಂಪನ್ನು ಸೂಸುವ ಮರಗಳನ್ನು ಕಾಣಬಹುದು.
2. ಚೈತ್ರದಲ್ಲಿ ಹಕ್ಕಿಗಳು ಕಲರವ ಹೇಗಿರುತ್ತದೆಂದು ಕವಿ ವರ್ಣಿಸಿದ್ದಾರೆ?
   ವೃಕ್ಷರಾಜನ ಸೌಂದರ್ಯ ಸಂತೋಷವನ್ನು ಕಂಡ ಹಕ್ಕಿಗಲು ಮುಗಿಲು ಮುಟ್ಟುವಂತೆ ಪಂಚಮ ಸ್ವರದಲ್ಲಿ ಮಧುರವಾಗಿ ಹಾಡುತ್ತದೆ. ಆಕಾಶವು ಪ್ರತಿಧ್ವನಿಸುವಂತೆ ಕಾಣುತ್ತದೆ. ಇದನ್ನು ಕಂಡ ಇತರ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಾ ಶಬ್ದ ಮಾಡುತ್ತವೆ.

3. ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು?
ಪ್ರಾಣಿ ಪಕ್ಷಿಗಳು ಮೈಕೊಡವಿ ಎದ್ದು ಹೊಸ ಚೈತನ್ಯದಿಂದ ತಮ್ಮ ತಮ್ಮ ಕಾರ್ಯಗಳಿಗೆ ಸಂತಸದಿಂದ ಹಾರಿ ಹೋಗುತ್ತವೆ.
4. ಚೈತ್ರದಲ್ಲಿ ನೆಲ ಮುಗಿಲು ವಾಲಗ ನಡೆದಂತೆ ಭಾಸವಾಗುತ್ತದೆ ಏಕೆ?
ಎಲ್ಲೆಲ್ಲೂ ಹೊಸ–ಹೊಸ ಭಾವನೆಗಳು ಕಂಡು ಬರುತ್ತದೆ. ಭೂಮಿಯಮೇಲಿನ ಪ್ರತಿಯೊಂದು ಜೀವಿಯಲ್ಲಿಯೂ ಹೊಸ ಚೈತನ್ಯ ಉತ್ಸಾಹ, ಮೂಡಿ ಬಂದಿದೆ. ಅವರ ಸಂತಸ ಸಂಭ್ರಮ ಅವುಗಳ ಹಾಡಿನ ಪ್ರತಿಧ್ವನಿಕೆಯಲ್ಲಿ ನೆಲ ಮುಗಿಲನ್ನು ಮುಟ್ಟುತ್ತದೆ.

## ಸದ್ದು ಮಾಡದಿರು! ಪದ್ಯ–04 ಡಾ॥ಸಿ.ಪಿ.ಕೆ

1. ಸದ್ದ ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ನೀಡುವ ಹೋಲಿಕೆಗಳಾವುವು?
ತಟ್ಟೆಯಲ್ಲಿ ಕರಪುರ ಕರಗುವಂತೆ, ದೀಪದೆದುರಿಗೆ ತಿಮಿರ ಸುರಿಯುವಂತೆ, ರವಿಕಿರಣಗಳಿಗೆ ಇಬ್ಬನಿ ಕರಗಿ ನೀರಾಗುವ ಹೋಲಿಕೆಗಳನ್ನು ನೀಡಿದ್ದಾರೆ.
2. ಕೂಗಾಟದ ಬದುಕು ನಿಷ್ಪಯೋಜಕ ಎಂಬುದಕ್ಕೆ ಕವಿ ನೀಡುವ ನಿದರ್ಶನಗಳಾವುವು?
ಕೂಗಾಡಿ ಹಾರಾಡಿ ಮಾಡುವುದರಿಂದ ಫಲವಿಲ್ಲ. ಇದರಿಂದ ರಂಪ ರಾದ್ಧಾಂತ ಆಗುವುದೇ ಹೊರತು ಪ್ರಯೋಜನವಿಲ್ಲ. ಉದಾ: ಹಸಿ ಸೌದೆ ಬುಸುಗುಟ್ಟು ಹೊಗೆ ಎಬ್ಬಿಸಿದಂತೆ ಸಿಡಿಮದ್ದಿಗೆ ಒಂದೇ ಒಂದು ಕಿಡಿ ಸೋಕಿದ ತಕ್ಷಣ ಅದು ಶಬ್ದ ಮಾಡಿ ಸಿಡಿದೆಳೆಸುವಂತೆ ಇದರಿಂದ ನಷ್ಟವೇ ಹೊರತು ಲಾಭವಿಲ್ಲವೆಂದು ಹೇಳಿದ್ದಾರೆ.
3. ಕರ್ಪೂರ'ದ ಕೆಲಸವೇನು? ಅದು ತನ್ನ ಕೆಲಸವನ್ನು ಹೇಗೆ ಪೂರೈಸುತ್ತದೆ?
ತಟ್ಟೆಯೊಳಗೆ ಮೌನದಲ್ಲಿ ಕರಗುತ್ತದೆಯೋ, ದೀಪದೆದುರು ಕತ್ತಲೆ ನಿಲ್ಲದೆ ಸರಿದು ಹೋಗುವಂತೆ, ಬದುಕನ್ನು ಶಾಂತ ರೀತಿಯಿಂದ ಕರ್ತವ್ಯವನ್ನು ಪೂರೈಸುತ್ತದೆ.
4. ಮಾನವನ ಬದುಕು ಕರ್ಪೂರದಂತೆ ಇರಬೇಕು ಏಕೆ ?
ಕರ್ಪೂರವು ತಟ್ಟೆಯೊಳಗೆ ಮೌನದಲ್ಲಿ ಕರಗುತ್ತದೆಯೋ ದೀಪದೆದುರು ಕತ್ತಲೆ ನಿಲ್ಲದೆ ಸರಿದು ಹೋಗುತ್ತದೆ. ಹಾಗೆಯೇ, ಮಾನವನು ಬದುಕನ್ನು ಶಾಂತ ರೀತಿಯಿಂದ ಮುನ್ನಡಿಸಬೇಕು ಕರ್ತವ್ಯವನ್ನು ಮುಗಿಸಬೇಕು. ಮಾಡುವ ಕೆಲಸವನ್ನು ಯಾರಿಗು ಅರಿವಾಗದಂತೆ ಮಾಡಬೇಕು.

## ಗುರಿ ಪದ್ಯ–05 ಶ್ರೀ.ಎಂ.ಜಿ.ಅಡಿಗ

1. ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಹೇಳಿದ್ದಾರೆ?
ಮಾನವರು ಕೀಳು ಆಸೆಗಳಲ್ಲಿ ಮುಳುಗಬಾರದು . ಮಾನವನಲ್ಲಿ ದಿನನಿತ್ಯದ ದುಡಿಮೆಯ ಫಲವನ್ನು ಪಡೆಯಬೇಕೆಂದರೆ ಮಾನವನ ಜೀವನವು ಹೂವಿನಂತೆ ಅರಳಬೇಕು. ಅವನಿಗೆ ಒಂದು ಗುರಿ ಇರಲೇಬೇಕು. ಗುರಿ ಇಲ್ಲದ ಬಾಳು ಎಲ್ಲಿಗೆ ಹೋಗಬೇಕೆಂಬ ನಿಶ್ಚಿತತೆ ಇಲ್ಲದ ಅಪಾರವಾದ ಕಡಲಲ್ಲಿ ಚುಕ್ಕಾಣೆ ಇಲ್ಲದ ನೌಕೆಯನ್ನು ನಡೆಸಿದಂತೆ.
2. ಅಡಿಗರ ಪ್ರಕಾರ ಜೀವನ ಯಾವಾಗ ಸಾರ್ಥಕವಾಗುತ್ತದೆ?
ಕೆಸರೊಳಗಿದ್ದರು ಕಮಲ ಉರ್ದ್ವಮುಖವಾಗಿರುತ್ತದೆ ಮೇಲೆ ಬಾಂದಳವನ್ನು ನೋಡುತ್ತಾ ಹೊಳೆಯುವ ಸೂರ್ಯನ ಕಿರಣಗಳ ಹಾಗೆಯೇ ಮಾನವ ತನ್ನ ಕಾರ್ಯಕ್ಕೆ ವಶವಾಗಬೇಕು. ಗುರಿಯನ್ನು ಮುಟ್ಟಿ ಮನುಜತೆಯನ್ನು ಸಾರ್ಥಕತೆಯನ್ನು ಪಡೆಯಬೇಕು.

3. ಗುರಿ ಪದ್ಯದ ಸಾರಾಂಶ ಬರೆಯಿರಿ?

ಗುರಿ ಇಲ್ಲದ ಜೀವನ ಸಾರ್ಥಕವಾಗುವದಿಲ್ಲ. ಗಾಳಿ ಬಂದರೆ ತೂರಿಕೊಳ್ಳುವುದು ಹೇಡಿತನ. ಬಂದೊಡನೆ ಶರಣಾಗುವದು ಹೆಣ್ತನ. ಇದರ ಬದಲಾಗಿ ಒಳ್ಳೆಯ ದಾರಿಯಲ್ಲಿ ಕೊನೆಯವರೆಗೂ ಪೌರುಷದ ಹೊನಲೊಳಗೆ ಬಾಳ್ವೆಯನ್ನು ದುಡಿಯಬೇಕು ಒಂದು ಬಾಣಕ್ಕೆ ಒಂದೇ ಗುರಿ ಇರುತ್ತದೆ. ಒಂದು ದೇಹದಲ್ಲಿ ಒಂದೇ ಆತ್ಮ ಇರುತ್ತದೆ. ಜೀವನಕ್ಕೆ ಹಲವು ಸಾಧ್ಯವು ಬೇಕಿಲ್ಲ. ಬದಲಾಗಿ ಒಂದೇ ಹೆಗ್ಗುರಿ ಇರಬೇಕು.

## ಮೂಡಲ್ ಕುಣಗಲ್ ಕೆರೆ ಪದ್ಯ-06 ಜನಪದಗೀತೆ

1. ಕುಣಿಗಲ್ ಕೆರೆ ಎಂಥವರನ್ನು ಬೆರಗುಗೊಳಿಸುವಂತಿತ್ತು ಏಕೆ?
   ಮೂಡಲ ದಿಕ್ಕಿನಲ್ಲಿರುವ ಕುಣಿಗಲ್ ಕೆರೆ ನೋಡುವವರಿಗೆ ಒಂದು ವೈಭೋಗ ಅದೃಷ್ಟ ಮಾಡಿರುವ ನಾವು ಕುಣಿಗಲ್ ಕೆರೆಗೆ ಚಂದಿರನು ಮೂಡಿಬರುತ್ತಾನೆ, ಎಷ್ಟು ಸೌಂದರ್ಯದಿಂದ ಕೂಡಿರುತ್ತದೆ ಎಂದರೆ ಅಬ್ಬಾ ಎಂದು ಆಶ್ಚರ್ಯಗೋಳಿಸುತ್ತದೆ.
2. ಭಾವ ಬಣ್ಣದ ಸೀರೆಯನ್ನು ತಂದಿದ್ದು ಏಕೆ?
   ಭಾವ ಎಂದರೆ ಹೆಣ್ಣು ಮಗಳಿಗೆ ಎಲ್ಲಿಲ್ಲದ ಅಕ್ಕರೆ. ಆಗಿನ ಕಾಲದಲ್ಲಿ ಮದುವೆ ಆಗುವ ಹುಡುಗ ಅಥವಾ ಮಾವನ ಮಗನನ್ನು ತುಂಬಾ ಅಕ್ಕರೆಯಿಂದ ಕಾಣುವಂತ ಸಂಬಂಧ, ಅದಲ್ಲದೇ ಅವನು ತಂದುಕೊಟ್ಟಂತಹ ಸೀರೆಯ ಬಣ್ಣವು ಎಷ್ಟು ಚನ್ನಾಗಿದೆಯೋ ಅಷ್ಟೇ ಕೆರೆಯು ತುಂಬಾ ಸುಂದರವಾಗಿರುವುದರಿಂದ ಭಾವ ಬಣ್ಣದ ಸೀರೆ ಎಂದೆ ಹೇಳಲಾಗಿದೆ.
3. ಕುಣಿಗಲ್ ಕೆರೆಯ ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?
   ಕೆರೆಯಲ್ಲಿ ಹಾರಕ್ಕೊಂದು ಹಾರುಕೋಲು ಹಾರುವುದಕ್ಕೆ ಹಾಯಿಸುವುದಕ್ಕೆ (ದೋಣಿ ನಡೆಸಲು) ಬಳಸುವ ಕೋಲು (ಹಾಯಿಕೋಲು) ಅದನ್ನು ನೂಕಲು ನೂಕುವುದಕ್ಕೆ ಇನ್ನೊಂದು ಕೋಲು ಮತ್ತು ಬಾಳೆಹಣ್ಣಿನ ಗಾತ್ರದ ಮೀನುಗಳು ಬೊಬ್ಬೆ ಹಾಕಿದರಿಂದ ಕುಣಿಗಲ್ ಕೆರೆಯು ಬೊಬ್ಬೆ ಹಾಕಿದೆ.

4. ಕುಣಿಗಲ್ ಕೆರೆಯ ನೀರುಂಡು ಬೆಳೆದ ಬಾಳೆಯನ್ನು ಜನಪದರು ಏನೆಂದು ವರ್ಣಿಸಿದ್ದಾರೆ?
   ಜನಪದರು ಬಾಳೆಯ ಹಣ್ಣಿಗೆ ಹೋಲಿಸಿದ್ದು ಏಕೆಂದರೆ ಹೇಗೆ ಬಾಳೆಹಣ್ಣು ಬಾಗಿದೆ ಹಾಗೆ ಕೆರೆಯು ಸಹ ಬಾಗಿರುವ ರೀತಿ ಕಾಣಿಸುತ್ತದೆ ಮತ್ತು ಸಂಬಂಧದಲ್ಲಿ ಭಾವ ಇದೆ ಎಂದು ಹೇಳಿದ್ದಾರೆ.

## ವಚನಗಳು ಪದ್ಯ-07 ಬಸವಣ್ಣನವರು

1. ಬಸವಣ್ಣನವರು ಜನರ ಧಾರ್ಮಿಕ ನಂಬಿಕೆಗಳನ್ನು ಏಕೆ ಖಂಡಿಸಿದ್ದಾರೆ?
   ಜನರು ನೀರನ್ನು ಕಂಡಲ್ಲಿ ಮುಳುಗುತ್ತಾರೆ, ಮರವನ್ನು ಕಂಡಾಗ ಸುತ್ತುತ್ತಾರೆ, ಹೀಗೆ ಬತ್ತುವ ಜಲವನ್ನು, ಒಣಗಿದ ಮರವನ್ನು ಮೆಚ್ಚಿದವರು ಕೂಡಲಸಂಗಮನನ್ನು ಅರಿಯಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ ಹೀಗೆ ಆ ಕಾಲದಲ್ಲಿದ್ದ ಮೂಢನಂಬಿಕೆಯನ್ನು ಖಂಡಿಸುತ್ತಾ ಜನರು ಅರ್ಥವಿಲ್ಲದ ಆಚರಣೆಯನ್ನು ದೂರವಿಡಬೇಕು. ಆದುದ್ದರಿಂದ ಬಸವಣ್ಣನವರು ಧಾರ್ಮಿಕ ನಂಬಿಕೆಯನ್ನು ಖಂಡಿಸಿದ್ದಾರೆ.
2. ರೂಪಿಸಿದ್ದು ಫಲವೇನು ಗುಣವಿಲ್ಲದನಕ್ಕೆ ಈ ಮಾತಿನ ವೈಶಿಷ್ಟ್ಯವೇನು?
   'ಗುಣವಿಲ್ಲದ ಮೇಲೆ ಸುಂದರವಾದ ರೂಪವಿದ್ದು ಫಲವಿಲ್ಲ ಎಂದು ಅಕ್ಕಮಹಾದೇವಿ ವಿವರಿಸಿದ್ದಾರೆ ಮಾನವನ ರೂಪಕ್ಕಿಂತ ಅವನಲ್ಲಿರುವ ಗುಣವು ಹೆಚ್ಚು ಪ್ರಾಮುಖ್ಯತೆಯನ್ನು ವಹಿಸುತ್ತದೆ. ಆದ್ದರಿಂದ ಮಾನವನ ರೂಪಕ್ಕಿಂತ ಅವನಲ್ಲಿರುವ ಗುಣವು ಮಿಗಿಲಾಗಿದೆ ರೂಪವಿಲ್ಲದ್ದಿದ್ದರು ಹಾಗೂ ಒಳ್ಳೆಯ ಗುಣವಿದ್ದಲ್ಲಿ ಎಲ್ಲರೂ ಮೆಚ್ಚುತ್ತಾರೆ.

1. ಶತ್ರುಬಲಕ್ಕೆ 'ನಮೋ' ಎಂದು ಉತ್ತರನು ಏಕೆ ಹೇಳಿದನು?
   ಕೌರವರ ಸೇನೆಯನ್ನು ಕಂಡ ಉತ್ತರನಿಗೆ ಎಂದೂ ಕಾಣದ ಅದ್ಭುತವನ್ನು ಕಂಡಂತಾಯಿತು. ಇಡೀ ಭೂಮಿ ಸೈನ್ಯದಿಂದ ತುಂಬಿತ್ತು . ಇವರೊಡನೆ ಕಾದಲು ಸಾಕ್ಷಾತ್ ಶಿವನಿಂದ ಮಾತ್ರ ಸಾಧ್ಯ ಇವರೊಡನೆ ಯುದ್ಧ ಮಾಡಿ ಗೆದ್ದಂತೆಯೇ 'ನಮೋ' ಎಂದು ಓದಲು ಪ್ರಾಂಭಿಸಿದನು.
2. ಓಡಲು ಓಡೆವಂತೆ ಅರ್ಜುನನು ಮನದಲ್ಲಿ ನಗಲು ಕಾರಣವೇನು?
   ಅರ್ಜುನನು ರಥವನ್ನು ನಾಲ್ಕೆಂಟು ಅಡಿಗಳಷ್ಟು ಮುಂದಕ್ಕೆ ಕೊಂಡು ಹೋಗಲು ಈ ಸಾರಥಿ ನನ್ನನ್ನು ಕೊಂದು ಬಿಟ್ಟನು ಎಂದು ಮೈ ಮೇಲಿನ ಸೆರಗನ್ನು ಒಟ್ಟುಗೂಡಿಸಿ ರಥದಲ್ಲಿ ಹಿಂದಕ್ಕೆ ಬಂದು ನಿಂತು ಕೆಳಗೆ ಧುಮುಕಿದನು. 'ಬದುಕಿದೆ' ಎಂದು ತಲೆಗೂದಲು ಕೆದರಿ ಹಾರಾಡುವಂತಹ ವೇಗದಿಂದ ಓಡಲು ತೊಡಗಿದುದನ್ನು ನೋಡಿ ಅರ್ಜುನನು ಓಡಲು ಓಡೆವಂತೆ ಮನದಲ್ಲಿ ನಕ್ಕನು.
3. 'ಕಾದುನಡೆ' ಎಂದು ಅರ್ಜುನನು ಉತ್ತರನನ್ನು ಏಕೆ ಒತ್ತಾಯಿಸಿದನು?
   ಉತ್ತರನು ಹೆಂಗೆಳೆಯರ ಮುಂದೆ ಕೌರವನ ಸೇನೆಯನ್ನು ಸುಲಭವಾಗಿ ಎದುರಿಸಬಹುದೆಂದು ಬಾಯ್ಗೆ ಬಂದಂತೆ ಮಾತನಾಡಿದನು ಆದರೆ ಯುದ್ಧದಲ್ಲಿ ಕೌರವ ಸೇನೆಯನ್ನು ಕಂಡು ಹೆದರಿ ಓಡಲು ಪ್ರಾರಂಭಿಸಿದನು ಆಗ ಅರ್ಜುನನು ಸೈನ್ಯವನ್ನು ಸರಿಯಾಗಿ ಅರಿಯದೆ ಹಲ್ಲುಕಿರಿದು ಮಾತನಾಡಿದ್ದೆ, ಈಗ ಅಂಜುಬುರುಕ ನರಿಯಂತೆ ಓಡುವುದು ಸರಿಯಲ್ಲ. ಕಾದುನಡೆ ಎಂದು ಅರ್ಜುನನು ಉತ್ತರನಿಗೆ ಹೇಳಿದನು.
4. ಯುದ್ಧವನ್ನು ಮಾಡದಯೆ ಸುಖಪಡಬಹುದೆಂಬುದನ್ನು ಉತ್ತರನು ಹಿಗೆ ಸಮರ್ಥಿಸಿದನು ?
   ಯುದ್ಧ ಭೂಮಿಯಿಂದ ಓಡಿ ಬಂದ ಪಾತಕವನ್ನು ಬ್ರಾಹ್ಮಣರು ಕಳೆಯುತ್ತಾರೆ. ಅಶ್ವಮೇಧ ಯಾಗವದ ಫಲವನ್ನು ಪ್ರತ್ಯಕ್ಷವಾಗಿಯೇ ಮಾಡಬಹುದು. ಅದರ ಫಲವನ್ನು ಪಡೆಯಲು ಸ್ವರ್ಗಲೋಕದ ಅಪ್ಸರೆಯರು ಬೇಕಾಗಿಲ್ಲ ನನ್ನ ಅರಮನೆಯ ನಾರಿಯರೇ ಸಾಕು. ನಮ್ಮ ದೊರೆತನವೇ ನಮಗೆ ಇಂದ್ರ ಪದವಿ' ಎಂಬುದಾಗಿ ಯುದ್ಧವನ್ನು ಮಾಡದೆಯೇ ಸುಖಪಡಬಹುದೆಂಬುದನ್ನು ಉತ್ತರನು ಸಮರ್ಥಿಸಿದನು.

## ಕಳ್ಳರ ಗುರು ಪೂರಕ ಓದು ಪಾಠ-01 ಬೆಟಗೇರಿ ಕೃಷ್ಣಶರ್ಮ

1. ವೈದ್ಯರು ತನ್ನ ವೃತ್ತಿಯ ಕುರಿತು ಹೆಂಡತಿ ರತ್ನಳಿಗೆ ಏನು ಹೇಳಿದರು?
   "ಈ ವೈದ್ಯವೃತ್ತಿ ದುಡ್ಡುಗಳಿಸಬೇಕಾದುದ್ದಲ್ಲ! ಕೇವಲ ಸಮಾಜದ ಕ್ಷೇಮ ಸಾಧನೆಗಾಗಿ ಇರುವುದು. ಸಮಾದದಿಂದ ನಮಗೆ, ಬದುಕಿ ಇರುವ ಮಟ್ಟಿಗೆ ಏನಾದರು ದೊರೆತರೆ ಸಾಕು" ಎಂದು ವೈದ್ಯರು ತನ್ನ ವೃತ್ತಿಯ ಬಗ್ಗೆ ತನ್ನ ಹೆಂಡತಿ ರತ್ನಾಳಿಗೆ ಹೇಳಿದರು.
2. ಹಾವನ್ನು ಕಂಡ ವೈದ್ಯರ ತಲೆಯಲ್ಲಿ ಯಾವ ವಿಚಾರಗಳು ಮೂಡಿಬಂದವು?
   "ಹಾವಿನಂತಹ ದುಷ್ಟ ಜಂತುವು ಕೆಣಕದೆ ಯಾರನ್ನೂ ಹಿಂಸಿಸದು ಮನುಷ್ಯ? ಮನುಷ್ಯ ಸುಮ್ಮನೆ ಬಿಡುವನೆ? ಅವನ ಆಸೆಯ ಹಾವು ಯಾರು ಕೆಣಕದಿದ್ದರೂ ಎಲ್ಲರನ್ನುಕಡಿಯುವುದು" ಎಂದು ಹಾವನ್ನು ಕಂಡ ವೈದ್ಯರು ತಲೆಯಲ್ಲಿ ವಿಚಾರಗಳು ಮೂಡಿಬಂದವು.

3. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?
ವೈದ್ಯರು ಮಗುವಿನ ನಾಡಿಯನ್ನು ಹಿಡಿದು ನೋಡಿದರು ಜ್ವರದ ರೀತಿಯಲ್ಲಿ ಪರೀಕ್ಷಿಸಿ ಗುರುತಿಸಿದರು. ಔಷಧಿಯ ಮಾತ್ರೆಯನ್ನು ಮಗುವಿಗೆ ಕುಡಿಸಿದರು. ವೈದ್ಯರಿಗೆ ಭೀಮನಾಯಕನ ಪ್ರಾಣ ರಕ್ಷಿಸಲು ಒಂದು ಸೊಪ್ಪಿನ ಬೇಕಾಯಿತು. ವೈದ್ಯರು ಕಷ್ಟದಿಂದ ಸೊಪ್ಪನ್ನು ಹುಡುಕಲು ಹೋದರು. ಸೊಪ್ಪು ಕಣ್ಣಿಗೆ ಕಂಡಾಗ ಚಿಕ್ಕ ಮಕ್ಕಳಂತೆ ಕುಣಿದಾಡಿದರು. ಸೊಪ್ಪನ ರಸದೊಂದಿಗೆ ಮತ್ತೊಂದು ಸಲ ಔಷಧಿಯನ್ನು ಕುಡಿಸಿದರು. ಕುಪ್ಪೆಯಲ್ಲಿದ್ದ ಒಂದು ಲೋಹವನ್ನು ಹಣೆ ತುಂಬ ಬಳಿದರು ಹೀಗೆ ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದರು

4. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು?
ವೈದ್ಯರ ಕಾಲ ಮೇಲೆ ಬಿದ್ದು ಹೇಳಿದ 'ಆ ಕಾಣದ ದೇವರು ಇದ್ದಾನೋ ಇಲ್ಲವೋ! ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು ನಿಮ್ಮ ಉಪಕಾರವನ್ನು ಎಂದೂ ಮರೆಯಲಾರೆ!" ಎಂದು ಕೃತಜ್ಞತೆಯನ್ನು ಸಲ್ಲಿಸಿದನು.

5. ವೈದ್ಯರು ಯಾವ ಮಾತುಗಳು ಭೀಮನಾಯಕನ ಮನಸ್ಸನ್ನು ಚುಚ್ಚಿದವು?
"ಕಾಯುವುದು ದೇವರ ಕೆಲಸ; ಕೊಲ್ಲುವುದು ರಾಕ್ಷಸರ ಕೆಲಸ" ಎಂಬ ಮಾತುಗಳನ್ನು ಭೀಮನಾಯಕನ ಮನಸ್ಸನ್ನು ಚುಚ್ಚಿದವು.

6. ವೈದ್ಯರು ತಮ್ಮ ಸೇವೆಯಿಂದ ಯಾವ ಪ್ರತಿಫಲಗಳು ಲಭಿಸಿದವು ಎಂದು ತನ್ನ ಹೆಂಡತಿಗೆ ಹೇಳಿದರು?
'ನಿಮ್ಮ ವೈದ್ಯಕ ಪ್ರಾವಿಣ್ಯಕ್ಕೆ ದೊರೆಯುವ ಪ್ರತಿಫಲ ತಿಳಿದಂತಾಯಿತು; ಕಾಲ ತುಂಬಾ ನೆಟ್ಟ ಮುಳ್ಳು. ಎಡವಿದ ಗಾಯ ; ನಿದ್ದೆಗೆಡುವುದು, ಉಪವಾಸವೇ ಪ್ರತಿಫಲವು ಲಭಿಸಿದವು.

7. ಭೀಮ ನಾಯಕನು ವೈದ್ಯರ ವಸ್ತಗಳನ್ನು ಹಿಂತುರಿಗಿಸಿ ಏನೆಂದು ಹೇಳಿದನು?
ವೈದ್ಯರ ವಸ್ತುಗಳನ್ನು ಹಿಂತಿರುಗಿಸಿ 'ದೇವರ ಒಡವೆಗಳನ್ನು ದೇವರಿಗೆ ಒಪ್ಪಸಲು ಬಂದಿದ್ದೇನೆ ನನ್ನನ್ನು ಕ್ಷಮಿಸಿ, ದಯವಿಟ್ಟು ಎಲ್ಲವನ್ನು ಒಪ್ಪಿಸಿ ಕೊಳ್ಳಬೇಕು.'

8. ವೈದ್ಯರ ಮನೆಯಿಂದ ಕಳುವಾದ ವಸ್ತುಗಳು ಮರಳಿ ಸಿಕ್ಕಿದ್ದ ಬಗೆ ಹೇಗೆ?
ಆಳುಗಳಿಬ್ಬರು ಗಂಟುಗಳನ್ನು ಬಿಚ್ಚಿ ಮುಂದೆ ಇಟ್ಟರು. ವೈದ್ಯರು ಮನೆಯಲ್ಲಿ ಕಳುವಾಗಿ ಹೋದ ಪದಾರ್ಥಗಳೆಲ್ಲಾ ಅವುಗಳಲ್ಲಿ ಇದ್ದವು ಭೀಮನಾಯಕ ಮತ್ತೆ ನುಡಿದ ತಮ್ಮ ಹಾಸಿಗೆ ನನ್ನ ಮಗನ ಮಗ್ಗುಲಲ್ಲಿ ಇದೆ. ಅದೊಂದನ್ನು ಮಾತ್ರ ತಂದಿಲ್ಲ. ಅದು ತಮ್ಮ ಹರೆಕೆಯಾಗಿ ನನ್ನ ಮಗನಿಗೆಂದೇ ಇರಲಿ ಎಂದು ಹೇಳಿದನು.

9. ಕಳ್ಳರ ಗುರುವಿನ ನಮಃಪರಿವರ್ತನೆ ಹೇಗಾಯಿತು?
ಕರೆದೊಯ್ಯುವುದರಲ್ಲಿ ಮೋಸವೇನೂ ಇಲ್ಲವಪ್ಪ? ಬೇಡ ಬೇಡವೇಂದರು ಪೋಲೀಸರು ನಮ್ಮ ಮನೆಯ ಕಳುವನ್ನು, ಶೋಧಿಸುವ ಕೆಲಸ ಕೈಗೊಂಡಿದ್ದಾರೆ ಎಂದು ಅವರ ಮನದಲ್ಲಿ ಮೂಡಿತು.

10. 'ಕಳ್ಳರ ಗುರು' ಪಾಠದಿಂದ ನಾವು ಕಲಿತುಕೊಳ್ಳಬೇಕಾದ ವಿಚಾರವೇನು?
ಮುಖ್ಯ ಅಂಶವಾಗದೇ ಆತ ಸಮಾಜ ಸೇವೆಯನ್ನು ಸಲ್ಲಿಸುತ್ತಿದ್ದನು ವೈದ್ಯನು ತಾನೇ ಕಷ್ಟಕ್ಕೆ ಒಳಗಾಗಿ ಭೀಮನಾಯಕನ ಜೀವನವನ್ನು ಉಳಿಸಲು ಹಲವಾರು ಕ್ರಮವನ್ನು ವಹಿಸಿದನು. ವೈದ್ಯರು ಸ್ವತಃ ಕಾಡಿನಲ್ಲಿ ತೆರಳಿ ಭೀಮನಾಯಕನಿಗೆ ಔಷಧಿಯನ್ನು ತಂದು, ಅವನ ಜೀವನವನ್ನು ರಕ್ಷಿಸಿದನು.

1. ಬದುಕು ಬದುವ ಬೇಲಿ ಯಾವ ರೀತಿ ಇದೆ?
   ಹೊಂಗೆ ಮರದ ಜೋಲಿಯಂತೆ, ಅರಳಿದ ಹೂವಂತೆ, ಮಲಗಿದ ಮಲ್ಲಿಗೆಯಂತೆ,ರೂಪ ತಾಯಿಯಂತೆ ನೆರಳು ಕರುಳಿನಂತೆ ಮಡಿಲ ರೀತಿಯಲ್ಲಿದೆ.
2. ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ?
   ರಾಜ್ಯಹುಟ್ಟಿ, ರಾಜ್ಯವುರುಳಿ, ಸಾಗಿ ಸಾಗಿ ಶತಶತಮಾನಗಳ ನೇಗಿಲಯೋಗಿ ಸಾಗಿಸಾಗಿ ಅದೇ ಸಂತೆ, ಅದೇ ಜಾತ್ರೆ ಗೊಬ್ಬರದ ಹಾಡು ಹೊಮ್ಮಿದೆ ಎಂಬ ನೆನಪುಗಳಿವೆ.
3. ಈ ಲೋಕವು ಯಾವ ರೀತಿ ಸಂತೋಷದಾಯಕವಾಗಿದೆ ಎಂದು ಕವಯಿತ್ರಿ ಹೇಳುತ್ತಾರೆ?
   ಬಣ್ಣ ಬಣ್ಣದ ಚಿಟ್ಟೆ ಹಾರಿ ಭೃಂಗದ ಸಂಗೀತ ಕೇಳಿ ಕೆಳಗೆ ಹೊರಗೆ, ಜೀವ ಹೂವ ಹಾಸಿಗೆಯ ಗಮ ಗಮನಿಸುವ ಗಮಲಿನಲ್ಲಿ ಇಲ್ಲೇ ಎಲ್ಲೋ ಅಡಗಿ ನಾಳೆಯೆಂಬ ಖುಷಿಯಿದೆ ಎಂದು ಹೇಳಿದ್ದಾರೆ.
4. ನಾಗರಿಕಥೆಯ ಬೇಳವಣಿಗೆಯ ಬಗ್ಗೆ ಕವಿಯಿತ್ರಿಗೆ ಯಾವ ಅಳಕು ಇದೆ?
   ಜನರು ನಗರವನ್ನು ಎಲ್ಲಾ ತಿಂದು ತೇಗಿದ್ದು ಬಗೆಬಗೆಯ ಕಾರೇನು, ಪಟಪಟ ಮೋಟಾರುಗಲೆನು ಅಲ್ಲಿ ಮೇಲೆ ಲೋಹದ ಹಕ್ಕಿ ಹಾರಾಟವೇನು ಈ ಎಲ್ಲಾ ಜೀವದ ಇಂಧನ ತೀರುತ್ತಲಿದೆ ಬದುಕು ನಾಳೆ ಏನೋ ಯಾಕೋ ಏನೋ ಎಂದು ಕವಯಿತ್ರಿಗೆ ಅಳುಕು ಇದೆ.
5. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕಿದೆ?
   ತೆಂಗು ತಾರೆಗಳ ನಾಡಿನಲ್ಲಿ ಬೆವರ ಸಾಲೆಯಲ್ಲಿ ಜೀವ ಅಮೃತವಡಗಿದೆ. ಜೀವವನ್ನು ಹಿಂಡಿ ಒಡಲನ್ನು ಹಿಂಡಿ , ತೈಲಧಾರೆಯು ಹೊಮ್ಮಿ ಬರಲಿ ಹೊಂಗೆ, ಹಿಪ್ಪೆ, ಜೀವ ಮೇಳ ನಡೆಯಲಿ ನಾಳೆ ಎಂಬ ಚಪ್ಪರದ ಕೆಳಗೆ ಮನುಕುಲದ ಭವ್ಯ ಬದುಕು ಮೊಳಕೆಯ ಒಡೆಯಲಿ, ಭವ್ಯವಾದ ಬದುಕು ಅರಳಬೇಕಿದೆ.

ಶ್ರೀ.ಫೈರೋಜ.ಎಂ.ಢಾಲಾಯಾತ ಸಹ ಶಿಕ್ಷಕರು ಕನ್ನಡ ಆ್ಯಂಗ್ಲೋ ಉರ್ದು ಬಾಲಕರ ಪ್ರೌಢ ಶಾಲೆ ಗದಗ, ತಾ/ಜಿ :– ಗದಗ 582101
ಮೋ.ನಂ:9886914021/8073240963